ಓ.ಎಸ್.ನಂ.288-17
ಪಿ.ಡಬ್ಲ್ಯೂ-1.

ದಿಃ 29-03-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ ಃ ವಾದಿ ಪರ ವಕೀಲರಿಂದ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

2. ನಾನು ಇಂದು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ವಂಶವೃಕ್ಷ, ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಮ್ಯುಟೇಷನ್ ರಿಜಿಸ್ಟರ್ ನ ಧೃಢೀಕೃತ ನಕಲು ದಿಃ22-08-2017. ಅದನ್ನು ನಿ.ಪಿ-2 ಎಂದು, ಮೂರು ರಿಮ್ಯಾಂಡ್ ಎಕ್ಸ್-ಟ್ರ್ಯಾಕ್ಟ್ ಧೃಡೀಕೃತ ನಕಲು ದಿಃ22-08-2017. ಅವುಗಳನ್ನು ಕ್ರಮವಾಗಿ ನಿ.ಪಿ-3 ರಿಂದ 5 ಎಂದು, ಅಸೆಸ್ಮೆಂಟ್ ರಿಜಿಸ್ಟರ್ ನ ಧೃಡೀಕೃತ ನಕಲು ದಿಃ22-08-2017. ಇದನ್ನು ನಿ.ಪಿ-6 ಎಂದು, ಇನ್ನೊಂದು 2004-05 ರಿಂದ 2017-18 ನೇ ಸಾಲಿನ ಅಸೆಸ್ಮೆಂಟ್ ರಿಜಿಸ್ಟರ್ ನ ಧೃಡೀಕೃತ ನಕಲು ದಿಃದಿಃ22-08-2017. ಇದನ್ನು ನಿ.ಪಿ-7 ಎಂದು, ದಿಃ03-07-2017 ರ ಒಂದು ಕಂದಾಯ ರಶೀದಿಯನ್ನು ನಿ.ಪಿ-8 ಎಂದು, ಓ.ಎಸ್.ನಂ. 44/17 ರ ದಾವೆಯ ಧೃಢೀಕೃತ ಪ್ರತಿ ಮತ್ತು ಆದೇಶ ಪ್ರತಿ ಗಳನ್ನು ನಿ.ಪಿ-9 ಎಂದು, ಧೃಢೀಕೃತ ಪ್ರಮಾಣ ಪತ್ರವನ್ನು ನಿ.ಪಿ-10 ಎಂದು, ಜೈನಾಬಿ ರವರ ಮರಣ ಪ್ರಮಾಣ ಪತ್ರವನ್ನು ನಿ.ಪಿ-11 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.